# ಮಂತ್ರಿಗಳಿಗೇ ಮನೆ ಇಲ್ಲ

## ವಿಧಾನಸೌಧದ ಸುತ್ತ ಬಾಡಿಗೆ ಮನೆಗಾಗಿ ಸಚಿವರ ಹುಡುಕಾಟ

**ಶಿವಕುಮಾರ್ ಬೆಳ್ಳಿತಟ್ಟೆ** ಬೆಂಗಳೂರು

ರಾಜ್ಯ ಸರಕಾರದ ಅನೇಕ ಮಂತ್ರಿಗಳು ಸಂಪುಟ ಸೇರಿ ಆಗಿದೆ. ಬೇಕಾದ ಖಾತೆಗಳನ್ನು ಹಠ ಮಾಡಿ ಪಡೆದಿದ್ದೂ ಮುಗಿದಿದೆ. ಆದರೆ ಅದೇ ಮಂತ್ರಿಗಳು ತಾವು ಇಚ್ಛಿಸಿದ ಸರಕಾರಿ ನಿವಾಸಗಳನ್ನು ಮಾತ್ರ ಪಡೆಯಲು ಸಾಧ್ಯವಾಗದೆ ಬಾಡಿಗೆ ಮನೆ ಹುಡುಕುತ್ತಿದ್ದಾರೆ.

ರಾಜ್ಯ ಸಂಪುಟದ ಸುಮಾರು 12ಕ್ಕೂ ಹೆಚ್ಚು ಸಚಿವರಿಗೆ ನಿವಾಸಗಳ ಹಂಚಿಕೆಯಾಗದೆ ತೊಂದರೆಯಾಗಿದ್ದು, ಇವರಲ್ಲಿ ಅನೇಕ ಸಚಿವರು ಸರಕಾರಿ ನಿವಾಸ ಸಿಗದೆ ವಿಧಾನಸೌಧ ಸುತ್ತಲಿನ ಪ್ರದೇಶಗಳಲ್ಲಿ ಬಾಡಿಗೆ ಬಂಗಲೆಗಳನ್ನು ಹುಡುಕುತ್ತಿದ್ದಾರೆ ಎಂದು ಸಿಬ್ಬಂದಿ ಮತ್ತು ಆಡಳಿತ ಸುಧಾರಣಾ ಇಲಾಖೆ ಶಿಷ್ಟಾಚಾರ ವಿಭಾಗದ ಅಧಿಕಾರಿಗಳು ಹೇಳಿದ್ದಾರೆ.

**ಇವರಿಗೆ ಸಿಕ್ಕಿಲ್ಲ ನಿವಾಸ**

**ರಮೇಶ್ ಜಾರಕಿಹೊಳಿ**
**ಬಸವರಾಜ ಬೊಮ್ಮಾಯಿ**
**ಶ್ರೀಮಂತ ಪಾಟೀಲ್**
**ಆನಂದ್ ಸಿಂಗ್**
**ಎಸ್.ಟಿ.ಸೋಮಶೇಖರ್**
**ಬೈರತಿ ಬಸವರಾಜು**
**ಬಿ.ಸಿ.ಪಾಟೀಲ್**
**ಆರ್.ಅಶೋಕ**
**ಕೋಟ ಶ್ರೀನಿವಾಸ ಪೂಜಾರಿ**
**ಆರ್.ನಾಗೇಶ್**
**ಸುರೇಶ್‌ಕುಮಾರ್**

ಸರಕಾರ ವ್ಯಾಪ್ತಿಯಲ್ಲಿರುವ ನಿವಾಸಗಳ ಹಂಚಿಕೆ ಮುಕ್ತಾಯವಾಗಿದ್ದು, ಅನೇಕ ಸಚಿವರಿಗೆ ಸರಕಾರಿ ನಿವಾಸವಿಲ್ಲದೆ ತೊಂದರೆಯಾಗಿದೆ. ಕೆಲವು ಸಚಿವರು ಬೆಂಗಳೂರಿನ ಖಾಸಗಿ ಅಪಾರ್ಟ್‌ಮೆಂಟ್ ಮತ್ತು ಪ್ರತ್ಯೇಕ್ ಫ್ಲ್ಯಾಟ್‌ಗಳಲ್ಲಿ ವಾಸವಾಗಿದ್ದಾರೆ. ಇಂಥ ಖಾಸಗಿ ಸ್ಥಳಗಳಿಗೆ ಮತಕ್ಷೇತ್ರದ ಜನರನ್ನು ಬರುವಂತೆ ಹೇಳುವುದೂ ಸರಿಯಲ್ಲ. ಅಹವಾಲು ಸ್ವೀಕಾರವೂ ಕಷ್ಟ. ಹಾಗೆಯೇ ಕ್ಷೇತ್ರದ ಜನತೆ ಸಚಿವರನ್ನು ಹುಡುಕಿಕೊಂಡು ಬರುವುದೂ ಇನ್ನೂ ಕಷ್ಟ. ಹೀಗಾಗಿ ಹೊಸದಾಗಿ ಸಂಪುಟ ಸೇರದ ಸಚಿವರು ಸರಕಾರಿ ನಿವಾಸಗಳಿಲ್ಲದೆ ತೊಂದರೆಗೆ ಸಿಲುಕಿದ್ದಾರೆ. ಅದರಲ್ಲೂ ಜಲಸಂಪನ್ಮೂಲ ಸಚಿವ ರಮೇಶ್ ಜಾರಕಿಹೊಳಿ, ಕೃಷಿ ಬಿ.ಸಿ.ಪಾಟೀಲ್ ಸೇರಿದಂತೆ ಸಚಿವರು ಸಾರ್ವಜನಿಕರ ಭೇಟಿಗೆ ಕಷ್ಟಪಡುತ್ತಿದ್ದಾರೆ.

**ಸಂಪುಟ ಗಾತ್ರ 34, ನಿವಾಸಗಳು 22 ಮಾತ್ರ:** ಸಚಿವರಿಗೆ ಮತ್ತು ಅತ್ಯುನ್ನತ ಸರಕಾರಿ ಹುದ್ದೆಯಲ್ಲಿರುವವರಿಗೆ ಹಂಚಿಕೆ ಮಾಡಲು ವಿಧಾನಸೌಧ ಸುತ್ತ 22 ಬಂಗಲೆಗಳಿವೆ. ಇವುಗಳನ್ನು ಲೋಕೋಪಯೋಗಿ ಇಲಾಖೆ ನಿರ್ವಹಣೆ ಮಾಡುತ್ತಿದ್ದು, ಸರಕಾರದ ಸಿಬ್ಬಂದಿ ಮತ್ತು ಆಡಳಿತ ಸುಧಾರಣಾ ಇಲಾಖೆ ಶಿಷ್ಟಾಚಾರ ವಿಭಾಗ ಹಂಚಿಕೆ ಮಾಡುತ್ತದೆ.

→ 5

# ಮಂತ್ರಿಗಳಿಗೇ ಮನೆ ಇಲ್ಲ

← ಮೊದಲಪುಟದಿಂದ

ಇವುಗಳ ಪೈಕಿ ಈಗಾಗಲೇ ಇಬ್ಬರೂ ಪ್ರತಿಪಕ್ಷಗಳ ನಾಯಕರಿಗೆ, ವಿಧಾನಸಭೆ ಸ್ಪೀಕರ್ ಹಾಗೂ ವಿ.ಪರಿಷತ್ ಸಭಾಪತಿ ಅವರಿಗೆ ಹಾಗೂ ಮುಖ್ಯಮಂತ್ರಿಗಳ ರಾಜಕೀಯ ಕಾರ್ಯದರ್ಶಿ ರೇಣುಕಾಚಾರ್ಯ ಅವರಿಗೆ ಹಂಚಿಕೆ ಮಾಡಲಾಗಿದೆ. ಇನ್ನುಳಿದ 16 ಬಂಗಲೆಗಳನ್ನು ಸಂಪುಟದಲ್ಲಿರುವ 28 ಸಚಿವರ ಪೈಕಿ 16ಮಂದಿಗೆ ಹಂಚಿಕೆ ಮಾಡಲಾಗಿದೆ. ಆದರೆ ಇನ್ನೂ 12 ಮಂದಿ ಸಚಿವರಿಗೆ ಸರಕಾರಿ ನಿವಾಸಗಳನ್ನು ಹಂಚಿಕೆ ಮಾಡಲಾಗಿಲ್ಲ. ಇವರಲ್ಲಿ ಬೆಂಗಳೂರು ವಾಸಿಗಳಾದ ಸಚಿವ ಕೆ.ಗೋಪಾಲಯ್ಯ, ಎಸ್.ಟಿ.ಸೋಮಶೇಖರ್, ಆರ್.ಅಶೋಕ, ಸುರೇಶ್‌ಕುಮಾರ್, ಬೈರತಿ ಬಸವರಾಜು ಅವರಿಂದ ಸರಕಾರಿ ನಿವಾಸಕ್ಕೆ ಅಷ್ಟೇನು ಬೇಡಿಕೆ ಬಂದಿಲ್ಲ. ಉಳಿದ ಸಚಿವರು ಮಾತ್ರ ಸರಕಾರಿ ನಿವಾಸಗಳನ್ನು ಪಡೆಯಲು ವಿಫಲವಾಗಿದ್ದಾರೆ.

**4 ಲಕ್ಷ ಬಾಡಿಗೆ ಸಚಿವರಿಗೂ ಕಷ್ಟ:** ಸಚಿವರಿಗೆ ಸರಕಾರಿ ನಿವಾಸ ಹಂಚಿಕೆಯಾಗದಿದ್ದರೆ ಬಾಡಿಗೆ ನಿವಾಸ ಮಾಡಿಕೊಳ್ಳಲು ಸರಕಾರ ₹ 1.50ಲಕ್ಷ ಭತ್ಯೆ ನೀಡುತ್ತದೆ. ಒಂದು ವೇಳೆ ಸಚಿವರು ಸ್ವಂತ ಮನೆಯಲ್ಲಿ ವಾಸವಿದ್ದು, ಭತ್ಯೆ ಪಡೆಯಲು ಮುಂದಾದರೆ ₹ 1.50 ಲಕ್ಷದ ಬದಲು ₹ 1 ಲಕ್ಷ ಮಾತ್ರ ಸಿಗುತ್ತದೆ. ಆದ್ದರಿಂದ ಕೆಲವು ಸಚಿವರು ಸಾಧ್ಯವಾದಷ್ಟು ವಿಧಾನಸೌಧ ಸುತ್ತ ಮನೆಗಳನ್ನು ನೋಡಿ ಬಾಡಿಗೆ ಪಡೆಯುತ್ತಾರೆ. ಈ ಹಿಂದಿನ ಸರಕಾರದಲ್ಲಿ ಪ್ರಿಯಾಂಕ್ ಖರ್ಗೆ ಸೇರಿದಂತೆ ಅನೇಕ ಸಚಿವರು ಇದೇ ರೀತಿ ಬಾಡಿಗೆ ಮನೆಯಲ್ಲಿದ್ದರು. ಸದ್ಯ ಇರುವ 12 ಸಚಿವರಲ್ಲಿ ಸಚಿವ ಆರ್.ಅಶೋಕ, ಕೆ.ಗೋಪಾಲಯ್ಯ, ಸುರೇಶ್‌ಕುಮಾರ್ ಸೇರಿದಂತೆ ಕೆಲವರು ಸ್ವಂತ ನಿವಾಸದಲ್ಲೇ ಇರಲು ಬಯಸಿದ್ದಾರೆ. ಹಾಗೆಂದು ಅವರು ನಿವಾಸ ಬೇಡ ಎಂದು ಲಿಖಿತವಾಗಿ ಹೇಳಿಲ್ಲ. ಉಳಿದ ಸಚಿವರಾದ ರಮೇಶ್ ಜಾರಕಿಹೊಳಿ, ಆನಂದ್ ಸಿಂಗ್, ಬಿ.ಸಿ.ಪಾಟೀಲ್, ಕೋಟ ಶ್ರೀನಿವಾಸ ಪೂಜಾರಿ, ಶ್ರೀಮಂತ ಪಾಟೀಲ್ ಅವರು ಬಾಡಿಗೆ ನಿವಾಸ ಹುಡುಕಾಟದಲ್ಲಿದ್ದಾರೆ. ಆದರೆ ವಿಧಾನಸೌಧ ಸುತ್ತ ಅಂದರೆ ಆರ್.ಟಿ.ನಗರ, ಸದಾಶಿವ ನಗರ ಮತ್ತು ಡಾಲರ್ಸ್ ಕಾಲೋನಿಯಲ್ಲಿ ಬಾಡಿಗೆ ಮನೆಗಳ ದರ ₹ 3 ಲಕ್ಷದಿಂದ ₹ 4 ಲಕ್ಷವರೆಗೂ ಇದೆ. ಆದರೆ ಸರಕಾರ ಬರೀ ₹ 1.50 ಲಕ್ಷ ಮಾತ್ರ ನೀಡುವುದರಿಂದ ಉಳಿದ 1.5ಲಕ್ಷವನ್ನು ಸಚಿವರೇ ಪಾವತಿಸಬೇಕು. ಆದ್ದರಿಂದ ಕೆಲವು ಸಚಿವರು ಕಡಿಮೆ ಬಾಡಿಗೆ ದರದ ಮನೆಗಳ ಹುಡುಕಾಟದಲ್ಲಿದ್ದಾರೆ.